## ರಾಜ್ಯದ ಐ.ಎ.ಎಸ್, ಐ.ಪಿ.ಎಸ್. ಅಧಿಕಾರಿಗಳ ವಿದೇಶ ಪ್ರವಾಸ

175 (1638) ಶ್ರೀ ಚಂದ್ರಪ್ಪ ಎಂ. (ಭರಮಸಾಗರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಐಎಎಸ್.ಐಪಿಎಸ್, ಐಎಫ್.ಎಸ್ ಅಧಿಕಾರಿಗಳು ವಿದೇಶ ಪ್ರವಾಸ ಮಾಡಲು ಇರುವ ಮಾನದಂಡ ಏನು; ಇವರು ವಿದೇಶ ಪ್ರವಾಸ ಮಾಡದೇ ಇದ್ದರೆ ಸರ್ಕಾರಕ್ಕೆ ಆಗುವ ನಷ್ಟವೇನು (ವಿವರ ನೀಡುವುದು)

ಆ) 2000-01 ರಿಂದ 30-7-2002 ರವರೆಗೆ ವಿದೇಶ ಪ್ರವಾಸ ಮಾಡಿದ ಅಧಿಕಾರಿಗಳ ವಿವರ ಹಾಗೂ ಅವರಿಗೆ ತಗಲಿದ ವೆಚ್ಚದ ವಿವರ ನೀಡುವುದು.

ಇ) ಈ ರೀತಿಯ ಪ್ರವಾಸದಿಂದ ರಾಜ್ಯಕ್ಕೆ ಆದ ಅನುಕೂಲಗಳೇನು?

ಈ) ರಾಜ್ಯಕ್ಕೆ ಅನುಕೂಲ ಇಲ್ಲದೆ ಇದ್ದಲ್ಲಿ ಸರ್ಕಾರ ವೆಚ್ಚದಲ್ಲಿ ವಿದೇಶ ಪ್ರವಾಸವನ್ನು ನಿಲ್ಲುವುದರ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದೆ

ಉ) ಬಹಳಷ್ಟು ಅಧಿಕಾರಿಗಳು ಈ ಪ್ರವಾಸವನ್ನು ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಭಾರತ ಸರ್ಕಾರ ಆಗಿಂದಾಗ್ಗೆ ಹೊರಡಿಸುವ ಮಾರ್ಗದರ್ಶಿಗಳು ಹಾಗೂ ಸೂಚನೆಗಳನ್ನು ಅಧಿಕಾರಿಗಳನ್ನು ವಿದೇಶ ಪ್ರವಾಸಕ್ಕೆ ನಿಯೋಜಿಸಲು ಪಾಲಿಸಲಾಗುತ್ತದೆ. ಅಧಿಕಾರಿಗಳನ್ನು ನಿಯೋಜಿಸುವುದರಿಂದ ಹೊರದೇಶದಲ್ಲಿ ಅಳವಡಿಸಲಾಗಿರುವ ತಂತ್ರಜ್ಞಾನವನ್ನು ನಮ್ಮ ರಾಜ್ಯದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಅಳವಡಿಸಿಕೊಳ್ಳಲು ಸಹಾಯಕವಾಗುವುದಲ್ಲದೆ ನಮ್ಮ ರಾಜ್ಯದಲ್ಲಿ ವಿವಿಧ ಯೋಜನೆಗಳಲ್ಲಿ ಬಂಡವಾಳ ಹೂಡಲು ವಿದೇಶಿಯರನ್ನು ಆಕರ್ಷಿಸಲು ಸಾಧ್ಯವಾಗುತ್ತದೆ. ಇದರಿಂದ ರಾಜ್ಯಕ್ಕೆ ಅನುಕೂಲವಾಗುತ್ತದೆಯೇ ಹೊರತು ಯಾವುದೇ ನಷ್ಟವಾಗುವುದಿಲ್ಲ.

ಆ) ಲಭ್ಯವಿರುವ ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ, ಕೈಗಾರಿಕೆ, ಕೃಷಿ ಹಾಗೂ ಇತರೆ ಕ್ಷೇತ್ರಗಳಲ್ಲಿ ಅಭಿವೃದ್ಧಿ ಹೊಂದಲು ಸಾಧ್ಯವಾಗಿದೆ. ಅಲ್ಲದೆ, ವಿದೇಶೀಯವರು ಹೆಚ್ಚಿನ ಪ್ರಮಾಣದಲ್ಲಿ ಬಂಡವಾಳ ತೊಡಗಿಸಲು ಮುಂದೆ ಬರುತ್ತಿದ್ದು, ರಾಜ್ಯದ ಸರ್ವತೋಮುಖ ಬೆಳವಣಿಗೆಗೆ ದಾರಿಯಾಗಿದೆ.

ಈ) ಉದ್ಭವಿಸುವುದಿಲ್ಲ.

ಉ) ಇಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿಲ್ಲ.

## ANNEXURE

| | | | |
|---|---|---|---|
| 1. DR. A. RAVINDRA, CHAIRAMAN AND MANAGING DIRECTOR KUID AND FC | IAS | FROM 3,4,2000 TO 5.4.2000 TO PARTICIPATE IN A WORKSHOP AT USA | MET BY THE WORLD BANK |
| 2. P.S. KHAROLA, MD, BANGALORE METROPOLITAN TRANSPORT CORPORATION. | IAS<br>IAS | TO ACCOMPANY THE MINISTER TO VIST SWEDEN, UAS AND MEXICO FROM 5.4.2000 TO 17.4.2000 | MET BY ASRTU DELHI |
| 3. R. SRIDHARAN SECRETARY, KERC | IAS | TO PARTICIPATE IN THE REGULATORY STAFF FUNCTIONS CO-TRAINER WORKSHOP AT USA FROM 21.4.2000 2 WEEKS | MET BY THE WASHINGTON |
| 4. B.K.BHATTACHARYA, CHIEF SECRETARY TO GOVT. | IAS | TO PARTICIPATE IN THE INDIAN DEVELOPMENT FORUM MEETING AT PARIS FROM 22.5.2000 TO 24.5.2000 | GOVERNMENT OF KARNATAKA |
| 5. T.K. ANIL KUMAR PROJECT DIRECTOR, UD AND COASTAL ENVIRONMENT MANAGEMENT PROJEC | IAS | TO ATTEND A SEMINAR ON PROJECT IMPLEMENTATION & ADMINISTRATION AT PHILLIPPINES FROM 29.5.2000 TO 9.6.2000 | MET BY ADB |
| 6. JAIRAJ COMMISSIONER, BANGALORE CITY CORPORATION | IAS | TO PARTICUIPATE IN THE ASIAN MAYORS FORUM-FIGHTING URBAN POVERTY AT CHINA FROM 26.6.2000 TO 29.6.2000 | MET BY ADB |
| 7. ARVIND SHRIVASTAVA, DEPUTY SECRETARY TO GOVERNMENT (B&R) | IAS | TO PARTICIPATE IN THE PROGRAM ON TAX ANALYSIS AND | MET OUT OF WORLD BANK ASSISTED |

| 1 | 2 | 3 | 4 | 5 |
|---|---|---|---|---|
| | FINANCE DEPARTMENT | | RESOURCE FORECASTING AT USA FROM 19.6.2000 TO 21.7.2000 | PROJECT FUNDS (PPMU) |
| 8. | A. SENGUPTA, PRINCIPAL SECRETARY TO GOVERNMENT, HEALTH AND FAMILY WELFARE DEPARTMENT | IAS | TO ATTEND XIII INTERNATIONAL CONFERENCE ON AIDS AT SOUTH AFRICA FROM 9.7.2000 TO 14.7.2000 | EXPENDITURE MET BY UNAIDS, |
| 9. | S.V. RANGANATH, SECRETARY TO CM. | IAS | ACCOMPANIED THE HON'BLE CM TO VISIT SINGAPORE FROM 21.6.2000 TO 28.6.2000 | GOVERNMENT OF KARNATAKA |
| 10. | VIVEK KULKARNI, SECRETARY TO GOVT., INFORMATION TECHNOLOGY DEPT., | IAS | ACCOMPANIED THE HON'BLE CM TO VISIT SINGAPORE FROM 21.6.2000 TO 28.6.2000 | GOVERNMENT OF KARNATAKA |
| 11. | DR. E.V. RAMANA REDDY, DIRECTOR, INFORMATION TECHNOLOGY DEPT., | IAS | ACCOMPANIED THE HON;BLE CM TO VISIT SINGAPORE FROM 21.6.2000 TO 28.6.2000 | GOVERNMENT OF KARNATAKA RS.22,607/- |
| 12. | K. JOTHIRAMALINGAM, MANAGING DIRECTOR, KPTCL | IAS | TO PARTICIPATE IN THE INTERNATIONAL COMMISSION ON LARGE DAMS MEETING AT CHINA FROM 5.9.2000 TO 22.9.2000 | MET BY KPCL |
| 13. | A.S. SRIKANTH, MANAGING DIRECTOR, KARNATAKA STATE CO-OPERATIVE APEX BANK LIMITED | IAS | TO PARTICIPATE IN A STUDY TOUR ORGANISED BY NAFSCOB TO AUSTRIA, GERMANY, NETHERLANDS, UK AND USA FROM 8.10.2000 TO 23.10.2000 | MET BY NAFSCOB |

| 1 | 2 | 3 | 4 | 5 |
|---|---|---|---|---|
| 14. | A.K. TIWARI, DEPUTY COMMISSIONER, UTTARA KANNADA DISTRICT, KARWAR, | IAS | TO PARTICIPATE IN THE MDP ON RESETTLEMENT AND REHABILITATION PROGRAMME CUM STUDY TOUR TO INDONESIA, THAI-LAND, PHILLIPPINES AND MALAYSIA 2.10.2000 TO 17.10.2000 | MET OUT OF THE ESTABLISH MENT CHARGES OF THE SEABIRD PROJECT FUNDS |
| 15. | B.S. PATIL, PRINCIPAL SECRETARY TO GOVERNMENT, COMMERCE & INDUSTRIES DEPT. | IAS | TO ATTEND THE INDIA IT SYMPOSIUM AND WORLD PC EXPO 2000 AT TOKYO FROM 15.10.2000 TO 22.10.2000 | GOVERNMENT OF KARNATAKA |
| 16. | VIVEK KULKARNI, SECRETARY, INFORMATION TECHNOLOGY | IAS | TO ATTEND THE INDIA IT SYMPOSIUM AND WORLD PC EXPO 2000 AT TOKYO FROM 15.10.2000 TO 22.10.2000 | GOVERNMENT OF KARNATAKA |
| 17. | KAUSHIK MUKHERJEE, EXECUTIVE DIRECTOR, KARNATAKA WATERSHED DEVELOPMENT SOCITY | IAS | TO PARTICIPATE IN THE 11TH CONFERENCE OF INTERNATIONAL SOIL CONSERVATION AT ARGENTINA FROM 22.10.2000 TO 27.10.2000 | MET BY DFID |
| 18. | ARVIND JANNU RAMACHANDRA MANAGING DIRECTOR, KARNATAKA STATE CO-OPERATIVE AGRICULTURAL AND | IAS | TO PARTICIPASTE IN THE STUDY TOUR ORGANISED BY THE NATIONAL CENTER FOR MANAGEMENT DEVELOPMENT AND | ONLY AIRFARE BY THE BANK BOARDING & LODGING, TRANSPORT EXPENDITURE |

| 1 | 2 | 3 | 4 | 5 |
|---|---|---|---|---|
| | RURAL DEVELOPMEN BANK | | AGRICULTURE AND RURAL DEVELOPMENT BANKING TO POLAND AND FRANCE FROM 19.11.2000 TO 5.12.2000. | MET KBY THE HOST COUNTRIES POLAND / FRANCE |
| 19. | ARVIND G. RISBUD, PROJECT ADMINISTRATOR, KHSDP | IAS | TO STUDY HEALTH CARE SYSTEMS ADOPTED IN AUSTRALIA AND NEW ZEALAND UNDER THE LEADERSHIP OF HON'BLE HEALTH AND FAMILY WELFARE MINISTER. FROM 20.11.2000 TO 29.11.2000 | WORLD BANK |
| 20. | KAPIL MOHAB, DEPUTY COMMISSIONER, DAKSHINA KANNADA DISTRICT, MANGALORE | IAS | TO ATIEND THE MULTI COUNTRY STUDY MISSION ON INTEGRATED COMMUNITY DEVELOPMENT AT CHINA FROM 23.11.2000 TO 30.11.2000 | MET BY ASIAN PRODUCTIVITY ORGANISATION. |
| 21. | ARVIND JADHAV, HOUSING COMMISSIONER, KHB | IAS | TO ATTEND AN INTERNATIONAL WORKSHOP ON LEADERSHIP IN URBAN MANAGEMENT AT SINGAPORE AND THAILAND FROM 2.12.2000 TO 13.12.2000 | MET BY HUDCO |

| 1 | 2 | 3 | 4 | 5 |
|---|---|---|---|---|
| 22. | RIN SANGA, METROPOLITAN COMMISSIONER, BMRDA | IAS | TO ATTEND AN INTERNATIONAL WORKSHOP ON LEADERSHIP IN URBAN MANAGEMENT AT SINGAPORE AND THAILAND FROM 2.12.2000 TO 13.12.2000 | MET BY BMRDA |
| 23. | BRAHM DUTT, CHAIRMAN AND MANAGING DIRECTOR, MPM LIMITED | IAS | FOR DISCUSSIONS REGARDING REPAY MENT OF FOREX LOAN OF CDC BY WAY OF ONE TIME SETTLE MENT AT UK FORA PERIOD OF 5 DAYS FROM 18.12.2000 | MET BY MPM LTD |
| 24. | V. BALASUBRAMANIAN, ADDITIONAL CHIEF SECRETARY, PUBLIC WORKS AND HOUSING DEPARTMENT | IAS | ACCOMPANIED THE HON'BLE PWD MINISTER TO VISIT MALAYSIA AND SINGAPORE FROM 10.12.2000 TO 16.12.2000 | MET BY KRDC |
| 25. | L.V. NAGARAJAN, MANAGING DIRECTOR, KRDC | IAS | ACCOMPANIED THE HON'BLE PWD MINISTER TO VISIT MALAYSIA AND SINGAPORE FROM 10.12.2000 TO 16.12.2000 | MET BY KRDC |
| 26. | SIDDAIAH, EXECUTIVE MEMBER, KIADB | IAS | TO ATTEND THE ITPL BOARD MEETING AT SINGAPORE ON 18.12.2000 | MET BY ITPL |

| 1 | 2 | 3 | 4 | 5 |
|---|---|---|---|---|
| 27. | RIN SANGA, METROPOLITAN COMMISSIONER, BMRDA | IAS | TO ATTEND AN INTERNATIONAL WORKSHOP ON LEADERSHIP IN URBAN MANAGEMENT AT INDONESIA, SINGAPORE AND THAILAND FROM 27.1.2001 TO 6.2.2001 | MET BY BMRDA |
| 28. | P.RAVIKUMAR DIRECTOR (FINANCE) KPTCL | IAS | TO PARTICIPATE IN THE 9TH INTER NATIONAL TRAIN ING PROGRAMME ON UTILITY REGULA TION & STRATEGY AT USA FROM 15.1.01 TO 26.1.01 | MET BY KPTCL RS. 4.5. LAKHS |
| 29. | M.K.SHANKARALINGEG OWDA ADDITIONAL SECRETARY TO CM | IAS | TO PARTICIPATE IN THE ITPL BOARD MEETING AT SINGAPORE ON 18.12.2000 | MET BY ITPL |
| 30. | M.N. VIDYASHANKAR, CHAIRMAN, BWSSB | IAS | UNDER AUS-AID PROJECT STUDY TOUR TO AUSTRALIA, PHILLIPPINES, MALAYSIA AND SINGAPORE FROM 21.1.01 TO 4.2.01 | MET BY AUSAID |
| 31. | RITESH KUMAR SINGH DEPUTY SECRETARY (B&R) FINANCE DE[PARTMENT | IAS | UNDER AUS-AID PROJECT STUDY TOUR TO AUSTRALIA PHILLIPPINES, MALAYSIA AND SINGAPORE FROM 21.1.01 TO 4.2.01 | MET BY AUSAID AND |

| 1 | 2 | 3 | 4 | 5 |
|---|---|---|---|---|
| 32. | DR. E.V. RAMANA REDDY DIRECTOR, INFORMATION TECHNOLOGY | IAS | TO ATTEND THE CAPACITY BUILDING WORKSHOP IN INFORMATION AND COMMUNICATION TECHNOLOGY (ICT) STRATEGY FOR DEVELOPING ASIA AT SINGAPORE FROM 21.2.01 TO 28.2.01 | MET BY ADB AND GOVERNMENT OF SINGAPORE |
| 33. | DR. MALATI DAS PRINCIPAL SECRETARY TO GOVERNMENT (HIGHER EDUCATION) EDUCATION DEPARTMENT. | IAS | TO ATTEND A COURSE OFFERED BY THE WORLD BANK AT WASHINGTON DC FROM 19.3.2001 TO 6.4.2001 | GOVERNMENT OF KARNATAKA AND WORLD BANK RS. 2,11,411/- |
| 34. | T.M. VDAYA BASKAR COMMISSIONER FOR PUBLIC INSTRUCTION | IAS | TO ATTEND A COURSE OFFERED BY THE WORLD BANK AT WASHINGTON DC FROM 19.3.01 TO 6.4.01 | GOVERNMENT OF KARNATAKA RS. 1,69,161/- |
| 35. | V. UMESH COMMISSIONER FOR SERICULTURE DEVELOPMENT AND DIRECTOR OF SERICULTURE | IAS | TO CARRYOUTA FEASIBILITY STUDY ON THE INTRO DUCTION OF SERI CULTURE IN ZIMBAB WE FROM 24.3.01 TO 12.4.01 | EXPENDITURE MET BY ZIMBABWE NATIONAL HANDLOOM AND SILK DEVELOPMENT |
| 36. | B.S. PATIL PRINCIPAL SECRETARY TO GOVERNMENT, COMMERCE AND INDUSTRIES DEPT., | IAS | AS A MEMBER OF FKCCI BUSINESS DELEGATION VISITED CHINA FROM 19.4.2001 TO 30.4.2001 | GOVERNMENT OF KARNATAKA RS. 1,03,500/- |

| 1 | 2 | 3 | 4 | 5 |
|---|---|---|---|---|
| 37. | VIVEK KULKARNI, SECRETARY TO GOVERNMENT, INFORMATION TECHNOLOGY | IAS | TO PARTICIPATE IN THE CEBIT IT EXHIBITION AT MANNOVER GERMANY FROM 21.3.2001 TO 28.3.2001 | GOVERNMENT OF KARNATAKA RS 2.36,922/- |
| 38. | DR. E.V. RAMANA REDDY DIRECTOR OF INFORMATION TECHNOLOGY, | IAS | TO PARTICIPATE IN THE CEBIT IT EXHIBITION AT HANNOVER, GERMANY FROM 21.3.2001 TO 28.3.2001 | GOVERNMENT OF KARNATAKA RS. 2,36,277/- |
| 39. | TERESA BHATTACHARYA CHIEF SECRETARY TO GOVERNMENT OF KARNATAKA | IAS | FOR THE NEGOTIONATIONS OF KARNATAKA ECONOMIC RESTRUCTURING LOAN HELD IN THE WORLD BANK OFFICE AT WASHINGTON DC USA FROM 5.5.2001 TO 15.5.2001 | GOVERNMENT OF KARNATAKA |
| 40. | C. GOPAL REDDY ADDITIONAL CHIEF SECRETARY AND PRINCIPAL SECRETARY TO GOVERNMENT, FINANCE DEPARTMENT | IAS | FOR THE NEGOTIATIONS OF KARNATAKA ECONOMIC RESTRUCTURING LOAN HELD IN THE WORLD BANK OFFICE AT WASHINGTON DC USA FROM 7.5.2001 TO 11.5.2001 | GOVERNMENT OF KARNATAKA RS. 3,94,697/- |
| 41. | M.K SHANKARALINGE GOWDA | IAS | FOR THE NEGOTIA TIONS OF | GOVERNMENT OF KARNATAKA |

| 1 | 2 | 3 | 4 | 5 |
|---|---|---|---|---|
| | ADDITIONAL SECRETARY TO CHIEF MINISTER | | KARNATAKA ECONOMIC RESTRU-CTURING LOAN HELD IN THE WORLD BANK OFFICE AT WASHINGTON DC USA FROM 7.5.2001 TO 11.5.2001 | RS 2,17,160/- |
| 42. | S.C. KHUNTIA SECRETARY TO GOVERNMENT, FINANCE DEPARTMENT | IAS | FOR THE NEGOTIATIONS OF KARNATAKA ECONOMIC RESTRUCTURING LOAN HELD IN THE WORLD BANK OFFICE AT WASHINGTON DC USA FROM 7.5.2001 TO 11.5.2001 | GOVERNMENT OF KARNATAKA RS. 2,17,160/- |
| 43. | P.S. KHAROLA MANAGING DIRECTOR, BMTC, BANGALORE | IAS | TO ATIEND 54TH UITP WORLD CONGRESS AT LONDON FROM 21.5.2001 TO 24.5.2001 | EXPENDITURE MET FROM THE FUNDS OF THE ASSOCIATION OF STATE ROAD TRANS PORT UNDER TAKINGS. |
| 44. | S. SWATANTRA RAO CHAIRMAN, KARNATAKA URBAN WATER SUPPLY AND DRAINAGE BOARD, BANGALORE | IAS | TO PARTICIPATE IN THE INTERNATIONAL WORKSHOP ON INNOVATIVE URBAN MANAGEMENT AT AUSTRALIA & MALAYSIA FROM 27 6.2001 TO 8.7.2001 | EXPENDITURE MET FROM THE HUDCO FUNDS OUT OF ITS R& D FUNDS |
| 45. | S.L. GANGADHARAPPA PRINCIPAL SECRETARY | IAS | TO PARTICIPATE IN THE INTERNATIONAL | EXPENDITURE MET BY ILO |

| 1 | 2 | 3 | 4 | 5 |
|---|---|---|---|---|
| | TO GOVERNMENT, RURAL DEVELOPMENT AND PANCHAYAT RAJ DEPARTMENT, BNAGALORE | | CONFERENCE ON PRACTICAL APPROACHES TO BONDED LABOUR IN INDIA AT GENEVA, SWITZERLAND ON 14.6.2001 | |
| 46. | N. VISWANATHAN, ADDITIONAL CHIEF SECRETARY AND DEVELOPMENT COMMISSIONER | IAS | FOR NEGOTIATIONS FOR THE PROPOSED COMPREHENSIVE KARNATAKA WATER SHED DEVELOPMENT PROJECT HELD AT THE WORLD BANK HEADQUARTERS AT WASHINGTON DC USA FROM 23.5.2001 TO 28.5.2001 | GOVERNMENT OF KARNATAKA |
| 47. | CHIRANJIV SINGH PRINCIPAL SECRETARY TO GOVERNMENT, AGRICULTURE AND HORTICULTURE DEPARTMENT, BANGALORE | IAS | FOR NEGOTIATIONS FOR THE PROPOSED COMPREHENSIVE KARNATAKA WATER SHED DEVELOPMENT PROJECT HELD AT THE WORLD BANK HEADQUARTERS AT WASHINGTON DC, USA FROM 23.5.2001 TO 28.5.2001 | GOVERNMENT OF KARNATAKA RS. 2,83,244/- |
| 48. | R.G. NADADUR DIRECTOR, WATERSHED DEVELOPMENT | IAS | FOR NEGOTIATIONS FOR THE PROPOSED COMPREHENSIVE KARNATAKA WATER SHED DEVELOPMENT PROJECT HELD AT THE WORLD BANK | GOVERNMENT OF KARNATAKA RS.2,20,128/- |

| 1 | 2 | 3 | 4 | 5 |
|---|---|---|---|---|
| | | | HEADQUARTERS AT WASHINGTON DC, USA FROM 22.5.01 TO 31.5.01 | |
| 49. | H. BASKER DIVISIONAL COMMISSIONER, MYSORE AND CHAIRMAN, MUDA, MYSORE | IAS | TO PARTICIPATE IN THE WORKSHOP ON INNOVATIVE URBAN MANAGEMENT HELD AT AUSTRALIA AND MALAYSIA FROM 27.6.2001 TO 8.7.01 | MET BY MYSORE URBAN DEVELOPMENT AUTHORITY FROM HUDCO FUNDS. |
| 50. | ANJUM PARWEZ CHIEF EXECUTIVE OFFICER, ZILLA PANCHAYAT, BELGAUM | IAS | TO PARTICIPATE IN THE MULTI COUNTRY STUDY MISSION ON MICRO CREDIT FOR COMMUNITY DEVE-LOPMENT HELD AT BANGALADESH FROM 25.6.2001 TO 5.7.01 | EXPENDITURE MET BY ASIAN PRODUCTIVITY ORGANISATION |
| 51. | SYED ZAMEER PASHA MANAGING DIRECTOR, KARNATAKA STATE AGRICULTURE MARKETING BOARD, BANGALORE | IAS | TO STUDY TO INFRA STRUCTURE IN FARM PRODUCE SYSTEM & FARM PRODUCE MARKETING IN USA AND CANADA FROM 7.7.01 TO 23.7.01 | EXPENDITURE MET FROM KARNATAKA STATE AGRICULTURE MARKETING BOARD. |
| 52. | S.M. ACHARYA CHAIRMAN AND MANAGING DIRECTOR, KARNATAKA SOAPS AND DETERGENTS LIMITED, BANGALORE | IAS | TO PARTICIPATE IN THE MADE IN INDIA SHOW ORGA NISED BY CII AT JOHANNES BURG, SOUTH AFRICA FROM 15.7.01 TO 24.7.01 | EXPENDITURE MET FROM KS&DL FUNDS. RS.1,14,983/- |
| 53. | VIVEK KULKARNI SECRETARY TO GOVT | IAS | TO PARTICIPATE IN THE ROAD SHOWS | EXPNDITURE MET BY |

| 1 | 2 | 3 | 4 | 5 |
|---|---|---|---|---|
| | INFORMATION TECHNOLOGY DEPARTMENT | | AND TIE CONFERENCE AND OTHER MEETINGS AT USA. 16.6.01 TO 3.7.01 | GOVERNMENT OF KARNATAKA RS 3,82,133/- |
| 54. | M.K. SHANKARALINGE GOWDA, ADDITIONAL SECRETARY OF CHIEF MINISTER | IAS | TO PARTICIPATE IN THE ROAD SHOWS AND TIE CONFERENCE AND OTHER MEETINGS AT USA, 16.6.2001 TO 24.6.2001 | EXPNDITURE MET BY GOVERNMENT OF KARNATAKA KARNATAKA RS. 3,55,121/- |
| 55. | DR. E.V. RAMANAREDDY DIRECTOR, IT DEPT., | IAS | TO PARTICIPATE IN THE ROAD SHOWS AND TIE CONFERENCE AND OTHER MEETINGS AT USA. 16.6.01 TO 25.6.01 | EXPNDITURE MET BY GOVERMENT OF KARNATAKA KARNATAKA RS. 3,95,861/- |
| 56. | ASHOK V. DAVID SECRETARY TO GOVERNMENT (MUNICIPALITIES AND UDAS) URBAN DEVELOPMENT DEPARTMENT, BANGALORE | IAS | TO PARTICIPATE IN THE WORKSHOP ON HOUSING AND URBAN INFRASTRUCTURE AT ROTTARDAM, AMSTERDAM, THE HAGUE AND BRUSSELS FROM 20.8.2001 TO 31.8.2001 | EXPENDITURE MET OUT OF THE FUNDS OF KARNATAKA URBAN WATER SUPPLY AND DRAINAGE BOARD |
| 57. | V. UMESH COMMISSIONER FOR SERICULTURE AND DIRECTOR OF SERICUTURE, BANGALORE | IAS | TO FAMILIARISE WITH THE TECHNOLOGICAL DEVELOPMENT AND IMPLEMENTATION OF PROJECTS AT CHINA, | EXPENDITURE MET FROM THE FUNDS OF SERICULTURE DEPARTMENT |

| 1 | 2 | 3 | 4 | 5 |
|---|---|---|---|---|
| | | | JAPAN, THAILAND AND VIETNAM FROM 6.8.2001 TO 3.9.2001 | |
| 58. | B.A. HARISH GOWDA CHIEF EXECUTIVE OFFICER AND EXECUTIVE MEMBER, KIADB, BANGALORE | IAS | TO ATTEND BOARD MEETING OF ITPAL AT SINGAPORE ON 16.8.2001 | EXPENDITURE MET BY ITPL |
| 59. | SANJAY KAUL, COMMISSIONER, HEALTH, AND FAMILY WELFARE SERVICES, BANGALORE | IAS | TO PARTICIPATE IN THE POPULATION, REPRODUCTIVE HEALTH AND HEALTH SECTYOR REFORM AT WORLD BANK INSITITUE WASHINGTON DC., USA FROM 10.9.2001 TO 28.9.2001. | EXPENDITURE MET UNDER WORLD BANK ASSISTED IPP VII PROJECT |
| 60. | K. JOTHIRAMALINGAM MANAING DIRECTOR, KPCL, BANLGAORE | IAS | TO ATTEND INTERNATIONAL ICOLD MEETING AND SEMINAR AT DRISDEN, GERMANY FROM 16.9.2001 TO 21.9.2001. | EXPENDTURE MET FROM KPCL |
| 61. | E. VENKATAIAH, COMMISSIONER OF LABOUR, BANGALORE. | IAS | TO PARTICIPATE IN THE LABOUR MARKET FLEXIBILITY COURSE ORGANISED BY APO AT TOKYO JAPAN FROM 18.9.2001 TO 21.9.2001 | EXPENDIUTRE MET BY APO |
| 62. | M. MAHESWARA RAO, CHIEF EXECUTIVE OFFICER, ZILLA PANCHAYAT, | IAS | TO PARTICIPATE IN THE JAPAN SOUTH ASIA YOUTH FRIENDSHIP | EXPENDITURE MET BY JAPAN INTERNATIONAL CO- |

| 1 | 2 | 3 | 4 | 5 |
|---|---|---|---|---|
| | GULBARGA | | PROGRAMME 2001 AT TOKYO JAPAN FROM 19.9.2001 TO 16.10.2001 | OPERATIVE AGENCY |
| 63. | T.K. ANIL KUMAR CHIEF EXECUTIVE OFFICER, ZILLA PANCHAYAT, MYSORE | IAS | TO PARTICIPATE IN THE JAPAN SOUTH ASIA YOUTH FRIENDSHIP PROGRAMME 2001 AT TOKYO JAPAN FROM 19.9.2001 TO 16.10.2001 | EXPENDITURE MET BY JAPAN INTERNATIONAL CO-OPERATIVE AGENCY |
| 64. | ADHIP CHAUDHURI PRINCIPAL SECRETARY TO GOVERNMENT, CO-OPERATION DEPARTMENT, | IAS | TO PARTICIPATE IN THE INTERNATIONAL EDUCATION AND EXPOSURE TOUR ORGANISED BY NAFSCOB AT SOUTH KOREA, JAPAN, 13.10.2001 TO 28.10.2001 | EXPENDITURE MET BY NATIONAL FEDERATION OF STATE CO-OPERATIVE BANKS LIMITED |
| 65. | M.R. SREENIVASA MURTHY SECRETARY TO GOVERNMENT, HOUSING DEPARTMENT. | IAS | TO STUDY THE PROJECT LOCATIONS OF JOINT VENTURE PARTNERS AT SINGAPORE, BRUNEL AND MUSCAT FROM 12.10.2001 TO 21.10.2001 | EXPENDITURE MET FROM KARNATAKA HOUSING BOARD RUNDS. |
| 66. | BHART LAL MEENA COMMISSIONER, KARNATAKA HOUSING BOARD, BANGALORE. | IAS | TO STUDY THE PROJECT LOCATIONS OF JOINT VENTURE PARTNERS AT SINGAPORE, BRUNEL AND MUSCAT FROM 12.10.2001 TO 21.10.2001 | EXPENDITURE MET FROM KARNATAKA HOUSING BOARD FUNDS. |

| 1 | 2 | 3 | 4 | 5 |
|---|---|---|---|---|
| 67. | N. VISWANATHAN, ADDITIONAL CHIEF SECRETARY AND DEVELOPOMENT COMMISSIONER | IAS | FOR NEGOTIATION WITH WORLD BANK ON KARNATAKA RURAL WATER SUPPLY AND SANITATION PROJECT-II AT WASHINGTON DC, USA FROM 5.11.2001 TO 9.11.2001 | EXPENDITURE MET BY GOVERNMENT OF KARNATAKA RS. 2,20,315/- |
| 68. | MOHAMMED MOHSIN DEPUTY SECRETARY TO GOVERNMENT, DPAR (SERVICES) | IAS | TO PARTICIPATE IN COURSE AT RIPA LONDON FROM 3.11.2001 TO 26.11.2001 | MET BY STATE GOVERNMENT RS 3,26,006/- |
| 69. | S.L. GANGADHARAPPA PIRINCIPAL SECRETARY TO GOVERNMENT, RURAL DEVELOPMENT AND PANCHAYAT RAJ DEPARTMENT | IAS | FOR NEGOTIATION WITH WORLD BANK ON KARNATAKA RURAL WATER SUPPLY AND, SANITATION PROJECT-II AT WASHINGTON DC, USA FROM 5.11.2001 TO 9.11.2001 | EXPENDITURE MET BY GOVERNMENT OF KARNATAKA RS, 2,20,315/- |
| 70. | RAJ KAMAL DIRECTOR, PP&MU AND EX-OFFICIO JOING SECRETARY TO GOVERNMENT, RURAL DEVELOPMENT & PANCHAYAT RAJ DEPT. | IAS | FOR NEGOTIATION WITH WORLD BANK ON KARNATAKA RURAL WATER SUPPLY AND SANITATION PROJECT-II AT WASHINGTON DC, USA FROM 5.11.2001 TO 9.11.2001 | EXPENDITURE MET BY GOVERNMENT OF KARNATAKA 2,20,315/- |
| 71. | N. SIVASAILAM | IAS | TO ATTEND | EXPENDITURE |

| 1 | 2 | 3 | 4 | 5 |
|---|---|---|---|---|
| | MANAGING DIRECTOR, RAJIV GANDHI RURAL HOUSING CORPORATION LIMITED, BANGALORE | | INTERNATIONAL WORKSHOP ON LOW COST HOUSING AND URBAN INFRASTRUCTURE AT AUSTRALIA AND NEW-ZEALAND FROM 8.12.2001 TO 20.12.2001 | MET FROM HUDCO FUNDS |
| 72. | G.V. KONGAWAD DIRECTOR OF MUNICIPAL ADMINISTRATION, BANGALORE, | IAS | TO ATTEND INTERNATIONAL WORKSHOP ON LOW COST HOUSING AND URBAN INFRASTRUCTURE AT AUSTRALIA AND NEWZELAND FROM 8.12.2001 TO 20.12.2001 | EXPENDITURE MET FROM HUDCO FUNDS. |
| 73. | VIVEK KULKARNI, SECRETARY TO GOVERNMENT, IT DEPARTMENT, BANGALORE | IAS | TO ATTEND THE SOAF EXPOO 2001 IT EXHIBITION AT SEOUL, KOREA FROM 29.11.2001 TO 2.12.2001 | EXPENDITURE MET BY GOVERNMENT OF KARNATAKA RS 1,30,833/- |
| 74. | DR. E.V. RAMANA REDDY DIRECTOR OF IT, B. LORE | IAS | TO ATTEND THE SOFT EXPOO 2001 IT EXHIBITION AT SEOUL, KOREA FROM 29.11.2001 TO 2.12.2001 | EXPENDITURE MET BY GOVERNMENT OF KARNATAKA RS. 1,31,045/- |
| 75. | ABHIJIT DASGUPTA PRINCIPAL SECRETARY TO GOVERNMENT PLANNING, SCIENCE & TECHNOLOGY DEPT | IAS | TO ATTEND NATIONAL HUMAN RESOURCE DEVELOPMENT WORKSHOP FROM 25.6.01 TO 27.6.01 | MET BY UNDP RS 79,667/- |

| 1 | 2 | 3 | 4 | 5 |
|---|---|---|---|---|
| 76. | G. KUMAR NAIK DEPUTY COMMISSIONER RAICHUR | IAS | TO PARTICIPATE IN THE MEETING ON A NEW PROGRAMME OF COOP, AT LONDON UK FROM 2.1.02 TO 7.1.02 | EXPNDIUTER MET BY THE EUROPEAN COMMISION (ASIA-URBS) |
| 77. | K. SHIVARAMU DEPUTY COMMISSIONER DAVANAGERE | IAS | TO ATTEND INTERNATIONAL WORKSHOP AT AUSTRALIA, NEW-ZEALAND AND THAILAND FROM 31.1.2002 TO 12.2.2002 | EXPENDIUTRE MET FROM THE FUNDS OF RAJIV GANDHI RURAL HOUSING CORPORATION AVAILABLE WITH HUDCO. |
| 78. | RAKESH SINGH DEPUTY COMMISSIONER BIJAPUR | IAS | TO ATTEND INTERNATIONAL WORKSHOP AT AUSTRALIA, NEW-ZEALAND AND THAILAND FROM 31.1.2002 TO 12.2.2002 | EXPENDIUTRE MET FROM THE FUNDS OF RAJIV GANDHI RURAL HOUSING CORPORATION AVAILABLE WITH HUDCO |
| 79. | ANJUM PARWEZ CHIEF EXECUTIVE OFFICER, ZILLA PANCHAYAT, BELGAUM | IAS | TO PARTICIPATE IN THE JAPAN SOUTH ASIA YOUTH FRIENDSHIP PROGRAMME IN THE FIELD OF ADMINISTRATION AT TOKYO JAPAN FROM 23.1.2002 TO 19.2.02 | EXPENDITURE MET BY JAPAN INTERNATIO-NAL CO-OPERATIVE AGENCY. |
| 80. | S.M. ACHARYA MANAGING DIRECTOR, KARNATAKA SOAPS & | IAS | TO PURCHASE AUSTRALIAN SANDAL AT WEST AUGSTRA- | MET BY KSDL FUNDS RS 2,18,291/- |

| 1 | 2 | 3 | 4 | 5 |
|---|---|---|---|---|
| | DETERGENTS LTD, BANGALORE | | -LIA (PERTH, KUMAR & ALBENI) FROM 15.2.02 TO 1.3.02 | |
| 81. | BHARAT LAL MEENA COMMISSIONER KARNATAKA HOUSING BOARD | IAS | TO PARTICIPATE IN THE INTERNATIONAL WORKSHOP AT AUSTRALIA AND NEW-ZELAND FROM 24.3.2002 TO 3.4.2002 | MET BY HUDO FUNDS |
| 82. | IM VITTALMURTHY COMMISSIONER OF TOURISM AND MANAGING DIRECTOR, KSTDC, BANGALORE | IAS | TO PARTICIAPTE IN THE ITB-2002 AT BERLIN GERMANY FROM 16.3.2002 TO 20.3.2002 | MET BY FUNDS OF KSTDC |
| 83. | N. VISWANÁTHAN ADDITIONAL CHIEF SECRETARY AND DEVELOPMENT COMMISSIONER | IAS | LOAN NEGOTIATIONS AT WORLD BANK AT WASHINGTON DC, USA FROM 10.3.2002 TO 19.3.2002 | EXPENDITURE MET FROM JALA SAMVARDHANA YOJANA SANGHA FUNDS. |
| 84. | S.C. KHUNTIA SECRETARY TO GOVERNMENT (PMU) FINANCE DEPARTMENT | IAS | LOAN NEGOTIATIONS AT WORLD BANK AT WASHINGTON DC, USA FROM 10.3.2002 TO 19.3.2002 | EXPENDITURE MET FROM JALA SAMVARDHANA JOJANA SANGHA FUNDS. |
| 85. | M. MADAN GOPAL EXECUTIVE DIRECTOR, KARNATAKA JALA SAMVARDHANA YOJANA SANGHA, BANGALORE. | IAS | LOAN NEGOTIATIONS AT WORLD BANK AT WASHINGTON DC, USA FROM 10.3.2002 TO 19.3.2002 | EXPENDITURE MET FROM JALA SAMVARDHANA YOJANA SANGHA FUNDS. |

| 1 | 2 | 3 | 4 | 5 |
|---|---|---|---|---|
| 86. | B.S. PATIL ADDITIONAL CHIEF SECRETARY AND PRINCIPAL SECRETARY TO GOVERNMENT, COMMERCE AND INDUSTRIES DEPARTMENT, B'LORE | IAS | TO REPRESENT THE HON'BLE CHIEF MINISTER TO ADDRESS AS A GUEST SPEAKER AT PARIS, FRANCE FROM 23.3.2002 TO 29.3.2002 | GOVERNMENT OF KARNATAKA |
| 87. | ADHIP CHAUDHURI PRINCIPAL SECRETARY TO GOVERNMENT, CO-OPERATION DEPARTMENT, BANGALORE | IAS | TO AT END THE 6TH ASIA-PACIFIC CO-OPERATIVE MINISTERS CONFERENCE AT KATHMANDU, NEPAL FROM 3.4.02 TO 7.4.02 | GOVERNMENT OF KARNATAKA RS 45,000/- |
| 88. | NILAYA MITASH DEPUTY COMMISSIONER, UTTARA KANNADA DISTRICT, KARWAR | IAS | TO ATTEND THE INTERNATIONAL WORKSHOP ON LEADERSHIP IN URBAN MANAGEMENT AT SINGAPORE AND AUSTRALIA FROM 6.4.2002 TO 18.4.2002 | MET BY HUDCO FUNDS RS 2,13,150/- |
| 89. | K.L. NEGI, CHAIRMAN AND MANAGING DIRECTOR, HUTTI GOLD MINES, BANGALORE | IAS | TO ATTEND THE WORLD GOLD COUNCIL MEETING AT SYDNEY, PERTH AND MELBOURNE, AUSTRALTA FROM 15.4.2002 TO 20.4.2002 | EXPENDITURE MET BY HUTTI GOLD MINES LIMITED |
| 90. | M.R. KAMBLE, COMMISSIONER FOR SOCIAL WELFARE DEPARTMENT | IAS | TO PARTICIPATE IN THE SEMINAR ON RURAL LIFE IMPROVEMENT FOR COMMUNITY DEVELOPMENT AT | EXPENDITURE MET BY APO RS 10,874/- MET BY STATE GOVT., |

| 1 | 2 | 3 | 4 | 5 |
|---|---|---|---|---|
| | | | TOKYO JAPAN FROM 21.4.2002 TO 28.4.2002 | |
| 91. | DR. A. RAVINDRA CHIEF SECRETARY TO GOVERNMENT OF KARNATAKA | IAS | TO PARTICIAPTE IN THE FIRST WORLD URBAN FORUM AT NAIROBI, KENYA FROM 29.4.2002 TO 3.5.2002 | EXPENDITURE MET BY UN-HABITAT NAIROBI KENYA |
| 92. | B.S. PATIL ADDITIONAL CHIEF SECRETARY AND PRINCIPAL SECRETARY TO GOVERNMENT, COMMERCE AND INDUSTRIES DEPARTMENT. | IAS | TO ATIEND THE WORLD CONGRESS OF BUSINESS LEADERS AT USA AND AUSTRALIA FROM 5.5.2002 TO 18.5.2002 | EXPENDITURE MET BY KARNATAKA UDYOG MITRA |
| 93. | RAJENDER KUMAR KATARTA JOINT COMMISSIONER OF COMMERCIAL TAXES (INT) SOUTH ZONE, BANGALORE. | IAS | TO PARTICIAPTE IN THE TAX ANALYSIS AND REVENUE FORECASTING HELD AT DUKE UNIVERSITY DURHAN NORTH CAROLINA, USA FROM 24.6.02.TO 19.7.02 | RS. 5,80,000/- GOVERNMENT OF KARNATAKA UNDER NATIONAL TRAINING POLICY DURING 2002-2003 |
| 94. | D. VENKATESWARA RAO SECRETARY TO GOVERNMENT, INFORMATION, TOURISM & YOUTH SERVICES DEPT., BANGALORE | IAS | TO PARTICIAPTE IN THE ARABIAN TRAVEL MARKET HELD AT DUBAI FROM 7.5.2002 TO 10.5.2002 | EXPENDITURE MET FROM TOURISM DEPARTMENT FUNDS |
| 95. | I.M. VITTAL MURTHY COMMISSIONER OF TOURISM, BANGALORE | IAS | TO PARTICIAPTE IN THE ARABIAN TRAVEL MARKET HELD AT DUBAT FROM 7.5.2002 TO 10.5.2002 | EXPENDITURE MET FROM TOURISM DEPARTMENT FUNDS. |

| 1 | 2 | 3 | 4 | 5 |
|---|---|---|---|---|
| 96. | MEERA C. SAXENA PRINCIPAL SECRETARY TO GOVERNMENT, EDUCATION DEPARTMENT | IAS | TO PARTICIPATE IN THE STUDY TOUR TO FRANCE FROM 23.5.2002 TO 2.6.2002 | EXPENDITURE MET BY EUROPEAN COMMISSION |
| 97. | LUKOSE VALLATHARAI STATE PROJECT DIRECTOR, PEP, BANGLAORE | IAS | TO PARTICIAPTE IN THE STUDY TOUR TO FRANCE FROM 23.5.2002 TO 2.6.2002 | EXPENDITURE MET BY EUROPEAN COMMISSION |
| 98. | KAUSHIK MUKHERJEE EXECUTIVE DIRECTOR KARNATAKA WATERSHED DEVELOOPMENT SOCIETY BANGALORE | IAS | TO PRESENT A PAPER TITLED "THE DYNAMICS OF PEOPLES' PARTICIPATION & CONTRIBUTION IN THE KAWAD PROJECT AT BEIJING, CHINA FROM 26.5.2002 TO 31.5.2002 | MET BY KAWAD SOCIETY |
| 99. | ASHOK V. DAVID MANAGING DIRECTOR MSIL, BANLGAORE | IAS | TO ATTEND NATIONAL ARBITRATION PROCEEDINGS AT COLOMBO, SRILANKA FROM 7.6.2002 TO 12.6.2002 | EXPENDITURE MET BY MSIL RS 2,65,035/- |
| 100. | R. SRIDHARAN SECRETARY, KARNATAKA ELECTRICITY REGULATION COMMISSION, BANGALORE | IAS | TO ATTEND PUBLIC-PRIVATE INFRASTRUC - TURE ADVISORY FACILITY ANNUAL MEETING AND WORKSHOP AT TOKYO JAPAN FROM 5.6.2002 TO 7.6.2002 | EXPENDIUTRE MET BY PUBLIC-PRIVATE INFRASTRUC-TURE ADVISORY FACILITY (PPIAF) |

| 1 | 2 | 3 | 4 | 5 |
|---|---|---|---|---|
| 101. | S. SWATANTRA RAO MANAGING DIRECTOR KARNATAKA STATE INDUSTRIAL INVEST-MENT & DEVELOPMENT CORPORATION, B'LORE | IAS | TO ADDRESS ROAD SHOWS FOR PROMO TION OF THE ASIAN ENTREPRENUERS CONFERENCE AT SINGAPORE & MALAYSIA FROM 10.6.2002 TO 15.6.2002 | EXPENDITURE MET FROM KSIIDC |
| 102. | DILIP RAU CHIEF ELECTRORAL OFFICER AND EX-OFFICIO PRINCIPAL SERETARY TO GOVER-MENT DPAR (ELECTIONS) | IAS | TO ATTEND A WORKSHOP ON VOTER REGN & ELECTORAL SYSTEM' AT MAURITIUS FROM 17.6.2002 TO 19.6.2002 | EXPENDITURE MET BY COMMON-WEALTH SECRETARIAT |
| 103. | G. LATHA KRISHNA RAO SECRETARY TO GOVERNMENT (E&E) FOREST, ECOLOGY & ENVIRONMENT DEPT., BANGALORE | IAS | FOR A STUDY-CUM-INFORMATION TOUR TO STUDY THE SYSTEM ADOPTED FOR DISPOSAL OF HAZARDOUS WASTE GENERATED BY INDUSTRIES AT GERMANY AND EUROPE FROM 16.6.02 TO 23.6.02 | EXPENDITURE MET BY GTZ GERMANY |
| 104. | UPENDRA TRIPATHY CHAIRMAN, KARNATAKA POLLUTION CONTROL BOARD, BANGLAORE | IAS | FOR A STUDY-CUM INFORMATION TOUR TO STUDY THE SYSTEM ADOPTED FOR DISPOSAL OF HAZARDOUS WASTE GENERATED BY INDUSTRIES AT GERMANY AND | EXPENDITURE MET BY GTZ GERMANY |

| 1 | 2 | 3 | 4 | 5 |
|---|---|---|---|---|
| | | | EUROPE FROM 16.6.02 TO 23.6.02. | |
| 105. | B.A. HARISH GOWDA, CHIEF EXECUTIVE DIRECTOR & EXECUTIVE MEMBERS, KARNATAKA INSTUTRIAL AREA DEVELOPMENT BOARD, BANGALORE | IAS | FOR A STUDY - CUM INFORMATION TOUR TO STUDY THE SYSTEM ADOPTED FOR DISPOSAL OF HAZARDOUS WASTE GENERATED BY INDUSTRIES AT GERMANY AND EUROPE FROM 16.6.02 TO 23.5.2002 | EXPENDITURE MET BY GTZ GERMANY. |
| 106. | SHAMIM BANU, CHAIRMAN & MANAGING DIRECTOR, INFRASTRUCTURE DEVELOPMENT AND FINANCE CORPORATION, BANGALORE. | IAS | FOR A STUDY TOUR TO JOHANNESBURG SOUTH AFRICA FROM 6.7.2002 TO 13.7.2002 | EXPENDITURE MET BY INDO USAID- FIRE (D) |
| 107. | C.S. SURANJANA SECRETARY TO GOVERNOR | IAS | USA-ACCOMPANIED HER EXCELLENCY GOVERNOR OF KARNATAKA TO PARTICIPATE IN THE SPURRING EQUITABLE GROWTH AND EMPOWERING PEOPLE CONFERENCE FROM 23.6.2002 TO 27.6.2002 | MET BY STATE GOVERNMENT RS 1,29,330/- |
| 108. | T.R. RAGHUNANDAN, SECRETARY TO GOVT RURAL DEVELOPMENT | IAS | TO PARTICIPATE IN COURSE ON FISCAL DECENTRALISATION | ENTIRE EXPENDITURE MET BY WORLD |

| 1 | 2 | 3 | 4 | 5 |
|---|---|---|---|---|
| | AND PANCHAYAT RAJ DEPARTMENT B'LORE. | | IN DEVELOPING COUNTRIES FOR POLICY MAKERS" HELD AT THE UNIVERSITY OF GEORGIA IN ATLANTA USA FROM 15.7.02 TO 2.8.02 | BANK |
| 109. | G.V. KRISHNA RAO, PROJECT DIRECTOR, KARNATAKA AIDS PREVENTION SOCIETY, BANGALORE | IAS | TO ATTEND NATIONAL AIDS PREVNTION WORKSHOP AT BARCELONA, SPAIN FROM 5.7.2002 TO 13.7.02 | EXPENDITURE MET BY UN-AIDS |

IPS OFFICERS

| SL.NO | Officer's name and Designation Sri/Smt | cadre | place, purpose & Duration of visit | Expenditure met by |
|---|---|---|---|---|
| 1 | 2 | 3 | 4 | 5 |
| 1. | JAIPARKASH DIRECTOR GENERAL OF POLICE & COMMANDANT GENERAL, HOMEGUARDS & EX-OFFICIO DIRECTOR CIVIL DEFENCE & DIRECTOR, FIREFORCE, BANGALORE | IPS | SINGAPORE & THAILAND TO PARTICIPATE IN THE INTER NATIONAL WORKSHOP FROM 1.12.2000 TO 13.3.2000 | MET BY R&D FUNDS OF HUDCO & KARNATAKA STATE POLICE HOUSEING CORPORAT-TION LTD, RS. 1,58,550/- |
| 2. | R. SRIKUMAR ADDITIONAL DIRECTOR GENERAL OF POLICE & CHAIRMAN & MANAGING DIRECTOR, KARNATAKA STATE POLICE HOUSIG CORPORATION LTD, BANGALORE | IPA | HONGKONG & CHINA TO PARTICIPATE IN THE 1ST CYBER CRIME SESSION FROM 24.4.2001 TO 28.4.2001 | MET BY CRIMINOLOG-YC ENTRE OF HONGKONG UNIVERSITY |

| 1 | 2 | 3 | 4 | 5 |
|---|---|---|---|---|
| 3. | AJAI KUMAR SINGH ADDITIONAL INSPECTOR GENERAL OF POLICE, EMPLOYMENT & TRG, BANGALORE | IPS | SWEDEN TO PARTICIPATE IN THE ROAD SAFETY PROGRAMME ON 14.8.2000 TO 14.9.2000 | MET BY SWEEDISH NATIONAL ROAD & TRANSPORT RESEARCH INSTITUTE |
| 4. | S.T. RAMESH, INSPECTOR GENERAL OF POLICE, PCW & MS, BANGALORE | IPS | HONGKONG TO PARTICIPATE IN THE CYBER CRIME SESSION FROM 23.4.2001 TO 28.4.2001. | MET BY CRIMINOLO-GY CENTRE' OF HONGKONG |
| 5. | BIPIN GOPALKRISHNA DIRECTOR (S&V) BMTC BANGALORE | IPS | LONDON TO ATTEND 54TH UITP WORLD CONGRESS 21.5.2001 TO 24.5.2001. | MET BY THE FUNDS OF ASSOCIATION OF STATE ROAD TRANSPORT UNDERSTA KINGS |
| 6. | P.K. GARG, DIRECTOR (S&V), KSRTC BANGALORE | IPS | LONDON TO ATTEND THE 54TH UITP WROLD CONGRESS FROM 21.5.2001 TO 24.5.2001 | MET FROM THE FUNDS THE ASSOCIA-TION OF STATE ROAD TRANSPORT UNDER TAKINGS |
| 7. | PREM SHANKAR MENA DEPUTY INSPECTOR GENERAL OF POLICE, FIRE FORCE SERVICES, B'LORE, | IPS | USA TO PARTICIPATE IN THE ATAP-2651 INDIA CRITICAL INCIDENT MANAGMENT COURSE AT LOUISIANA STATE POLICE ACADEMY 4.3.2002 TO 15.3.2002 | MET BY AMERICAL STATE POLICE ACADEMY ACADEMY. |
| 8. | BIPIN GOPALAKRISHNA MANAGING DIRECTOR, BMTC, BANGALORE | IPS | MANILA, PHILIPPINES TO ATTEND REGIONAL WORKSHOP ON TRANSPORT PLANNING, DEMAND | MET BY ADR |

| 1 | 2 | 3 | 4 | 5 |
|---|---|---|---|---|
| | | | MANAGEMENT & AIR QUALITY 26.2.2002 TO 27.3.2002 | |
| 9. | Y.R. PATIL REGISTRAR, KARNATAKA UNIVERSITY, DHARWAD | IPS | TO PARTICIPATE IN THE HIGHER EDUCATION MANAGEMENT PROGRMME 2002 AT WARVICK AND OXFORD UNVIERSITY, UK FROM 23.6.02 13.7.02 | MET BY UNIVERSITY FUNDS |
| 10. | M.V. MURTHY, DIRECTOR 9PERSONNEL AND ENVIRONMENT) KSRTC, BANGALORE | IPS | TO PARTICIPATE IN THE REGIONAL TRAINING ON ADDICITION REHABILITATION | EXPENDITURE MET BY ILO |
| 11. | BIPIN GOPALAKRISHNA MANAGING DIRECTOR, BMTC BANGALORE | IPS | TO PARTICIPATE IN THE 3RD UITP ASIA PACIFIC CONGRESS HLE DAT SHANGHAI, CHINA FROM 18-21 NOVEMBER 02 | EXPENDITURE MET BY THE FUNDS OF ASSOCIAT-OF STATE ROAD TRANSPORT UNDER TAKING NEW DELHI. |
| 12. | M.F. PASHA DIRECTOR (SECURITY & VIGILANCE BMTC, BANGALORE | IPS | TO PARTICIPATE IN THE 3RD UNITS ASIA PACIFIC CONGRESS HLE DAT SHANGHAI, CHINA FROM 18-21 NOVEMBER 02 | EXPENDITURE MET BY THE FUNDS OF ASSOCIATION OF STATE ROAD TRANSPORT UNDER TAKING NEW DELHI. |
| 13. | Y.R. PATIL REGISTRAR KARNATAKA UNIVERSITY DHARWAD | IPS | TO PARTICIPATE IN THE HIGHER EDUCATION MANAGMENT PROGRAMME 2002 AT WARVICK AND OXFORD UNIVERSITY, UK FROM 23.6.2002 TO 13.7.2002 | EXPENDIURE MET BY KARNATAKA UNIVERSITY FUNDS |

IFS OFFICERS

| SL.NO | Officer's name and Designation Sri/Smt | cadre | place, purpose & Duration of visit | Expenditure met by |
|---|---|---|---|---|
| 1 | 2 | 3 | 4 | 5 |
| 1. | T.V. MOHANDAS GENERAL MANAGER, KARNATAKA CASHEW DEVELOPMENT CORPN., MANGALORE | IFS | UK-TO ATTEND A CORUSE ON INTEGRATED RESOURCE MANAGEMENT FROM 24.1.2000 TO 8.4.2000 | JBIC ASSISTED PROJECT FUNDS RS. 8,23,959/- |
| 2. | B.M. PARAMESWARA DEPUTY CONSERVATOR OF FORESTS, MANDYA DIVISION, MANDYA | IFS | UK -TO ATTENDA CORUSE ON INTEGRATED RESOURCE MANAGEMENT FROM 24.1.2000 TO 8.4.2000 | JBIC ASSISTED PROJECT FUNDS RS. 8,21,701/- |
| 3. | A.M. ANNAIAH, DEPUTY CONSERVATOR OF FORESTS, HUNSUR | IPS | SOUTH AFRICA TO ATTEND A SYMPOSIUM OF INTERNATIONAL WILDLIFE RANCHING FROM 19.3.2001 TO 23.3.2001 | ECO-DEVPT., PROJECT FUNDS RS. 1,63,600/- |
| 4. | G. VIDYASAGAR, CONSERVATOR OF FORESTS, BANGALORE | IFS | UK TO ATTEND A COURSE ON RURAL RESOURCE MANAGMENT FROM 25.2.02 TO 17.5.02 | JBIC ASSISTED PROJECT FUNDS RS 6,00,000/- |
| 5. | MANOJ KUMAR SHUKLA DEPUTY CONSERVATOR OF FORESTS, SOCIAL FORESTRY, RAICHUR | IFS | UK TO ATTEND A COURSE ON RURAL RESOURCE MANAGMENT FOR 25.2.02 TO 17.5.02 | JBIC ASSISTED PROJECT FUNDS RS, 3,25,000/- |
| 6. | MEENAKSHI NEGI, DEPUTY CONSERVATOR OF FORESTS, PMUM B' LORE | IFS | UK TO ATTEND A COURSE ON REMOTE SENSING, GIS AND EIA FROM 25.2.02 TO 5.4.02 | JBID ASSISTED PROJECT FUNDS RS. 3,25,000/- |
| 7. | DR. R. RAJU, DEPUTY CONSERVATOR OF FORESTS, MYSORE | IFS | UK TO ATTEND A COURSE ON REMOTE SENSING, GIS & EIA FROM 25.2.02 TO 5.4.02 | JBIC ASSISTED PROJECT FUNDS RS 3,25,000/- |

| 1 | 2 | 3 | 4 | 5 |
|---|---|---|---|---|
| 8. | S.K. CHAKRABARTHY, PRINCIPAL CHIEF CONSER VATOR OF FORESTS, (WILDLIFE), ARANYA BHAVAN, BANGALORE | IFS | SINGAPORE TO STUDY SINGAPORE NIGHT SAFARI FORM 16.4.02 TO 18.4.02 | STATE GOVERNMENT RS. 1,03,000/- |
| 9. | A.K. VARMAM, CHIEF CONSERVATOR OF FORESTS AND MANAGING DIRECTOR, JUNGLE LODGES AND RESORTS, BANGALORE | IFS | SINGAPORE TO STUDY SINGAPORE NIGHT SAFARI FROM 16.4.02 TO 18.4.02 | STATE GOVERNMENT RS. 1,03,000/- |
| 10. | S.K. CHAKRABARTI, PRINCIPAL CHIEF CONSER -VATOR OF FORESTS, (WILDLIFE) | IFS | TO ATTEND A MEETING OF THE IUCN/SSC ASIAN ELEPHANT SPECIALIST GROUP AT PHNOM PENH, CAMBODIA FROM 27.5.02 TO 30.5.02. | EXPENDITURE MET BY IUCN |

ಶ್ರೀ ಎಂ. ಚಂದ್ರಪ್ಪ :- ಮಾನ್ಯ ಅಧ್ಯಕ್ಷರೆ. ನನಗೆ ಬಹಳ ಆಶ್ಚರ್ಯವಾಗುವುದು ಏನೆಂದರೆ, ನನ್ನ ಪ್ರಶ್ನೆ ಜನ ಬಿಎಎಸ್, ಐಪಿಎಸ್ ಮತ್ತು ಐಫ್‌ಎಸ್ ಅಧಿಕಾರಿಗಳು ವಿದೇಶ ಪ್ರವಾಸ ಮಾಡಿದ್ದಾರೆ, ಅವರ ವೆಚ್ಚ ಎಷ್ಟು ಆಗಿದೆ ಎಂದು ಕೇಳಿದ್ದೇನೆ. ಆದರೆ ಮಾನ್ಯ ಮುಖ್ಯಮಂತ್ರಿಗಳಿಗೆ ಅಧಿಕಾರಿಗಳು ಸರಿಯಾದ ಮಾಹಿತಿ ಕೊಟ್ಟಿಲ್ಲ. ಸರ್ಕಾರದವರು ನೀಡಿರತಕ್ಕಂತಹ ಉತ್ತರದಲ್ಲಿ ಎಷ್ಟು ಹಣ ಯಾರ್ಯಾರಿಗೆ ವೆಚ್ಚವಾಗಿದೆ ಎಂದು ತಿಳಿಸಿಲ್ಲ. ಬೇರೆ ಬೇರೆ ಸಂಸ್ಥೆಗಳಿಂದ ಕಳುಹಿಸಿದ್ದೇವೆಂದು ಮಾಹಿತಿಯನ್ನು ಕೊಟ್ಟಿದ್ದಾರೆ. ಬೇರೆ ಬೇರೆ ಸಂಘಸಂಸ್ಥೆಗಳು ಸರ್ಕಾರದ ಆಡಳಿತಕ್ಕೆ ಒಳಪಟ್ಟಿಲ್ಲವೇ? ಸರ್ಕಾರದಿಂದ ಹಣ ವೆಚ್ಚ ಮಾಡಿಲ್ಲವಾ? ಏತಕ್ಕೆ ಮಾನ್ಯ ಮುಖ್ಯಮಂತ್ರಿಗಳ ಬಾಯಿಯಿಂದ ಸತ್ಯಕ್ಕೆ ದೂರವಾದ ಉತ್ತರವನ್ನು ಕೊಡುವುದಾದರೆ ನಾನು ಹೇಗೆ ಉತ್ತರವನ್ನು ಕೇಳಬೇಕು? ಇದರಲ್ಲಿ 129 ಜನ ಅಧಿಕಾರಿಗಳಲ್ಲಿ ಇಬ್ಬರು ಮೂವರು ಅಧಿಕಾರಿಗಳ ವೆಚ್ಚವನ್ನು ಕಳುಹಿಸಿದ್ದಾರೆ. ಮೋಹನ್‌ರಾವ್ ಎಂಬ ಅಧಿಕಾರಿ ಕ್ಯಾಶ್ಯೂ ಕಾರ್ಪೋರೇಷನ್ ಕಂಪನಿಯಿಂದ ವಿದೇಶ ಪ್ರವಾಸ ಮಾಡುತ್ತಾರೆ. ಒಬ್ಬ ಅಧಿಕಾರಿಯ ವೆಚ್ಚ 8.23 ಲಕ್ಷ ರೂಪಾಯಿಗಳು. ಅದೇ ರೀತಿ ಇನ್ನೊಬ್ಬ ಅಧಿಕಾರಿಗಳ ಬಿ.ಎಮ್ ಪರಮೇಶ್ವರ್ ಎನ್ನುವವರು ಕಂಪನಿ ನೀಡಿರುವಂತಹ ಹಣದಿಂದ ವಿದೇಶ ಪ್ರವಾಸ ಮಾಡಿರುತ್ತಾರೆ. ಅವರ ವೆಚ್ಚ 8.21 ಲಕ್ಷ ರೂಪಾಯಿಗಳು ಈ ಕಂಪನಿಗಳು ಲಾಸ್‌ನಲ್ಲಿ ನಡೆಯುತ್ತಿವೆ. 1957ರಿಂದ ಶೇಕಡ 85 ಕ್ಕಿಂತ ಹೆಚ್ಚು ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರತಕ್ಕಂತಹ ಈ ಕಂಪನಿಗಳು ಲಾಸ್‌ನಲ್ಲಿ ನಡೆಯುತ್ತಿವೆ. ಈ ಕಂಪನಿಗಳು ಕಂಪನಿ ಆಕ್ಟ್ ಕೆಳಗಡೆ ರಿಜಿಸ್ಟರ್ ಆಗಿ ನಷ್ಟವನ್ನು ಅನುಭವಿಸುತ್ತಿದ್ದರೂ ಕೂಡ 8 ರಿಂದ 10 ಲಕ್ಷ ಖರ್ಚು ಮಾಡಿದ್ದಾರೆ ಎಂದರೆ, ಕರ್ನಾಟಕ ಸರ್ಕಾರಕ್ಕೆ ಎಷ್ಟು ಹೊರೆಯಾಗಿದೆ ಎಂಬ ಮಾಹಿತಿಯನ್ನು ಮಾನ್ಯ ಮುಖ್ಯಮಂತ್ರಿಗಳು ಕೊಡಬೇಕು.

ಶ್ರೀ ಎಸ್.ಎಂ. ಕೃಷ್ಣ :- ಮಾನ್ಯ ಅಧ್ಯಕ್ಷರೇ, ಅಧಿಕಾರಿಗಳು ಹಲವಾರು ಕಾರ್ಯಕ್ರಮಗಳ ಅಡಿಯಲ್ಲಿ ವಿದೇಶಗಳಿಗೆ ಹೋಗುತ್ತಾರೆ. ಕೆಲವರು ರಾಜ್ಯ ಸರ್ಕಾರದ ಖರ್ಚಿನಲ್ಲಿ ಹೋಗುತ್ತಾರೆ, ಕೆಲವರು ಕೇಂದ್ರ ಸರ್ಕಾರದ ಭರಿಸತಕ್ಕಂತಹ ಖರ್ಚಿನಲ್ಲಿ ಹೋಗುತ್ತಾರೆ. ಕೆಲವರು ಇತರೆ ಸಂಘಸಂಸ್ಥೆಗಳು ಉದಾಹರಣೆಗೆ ಲೇಬರ್ ಆರ್ಗನೈಸೇಷನ್, ಹೆಲ್ತ್ ಆರ್ಗನೈಸೇಷನ್, who ಇವರುಗಳೆಲ್ಲರೂ ಕೂಡ ಸ್ಪಾನ್ಸರ್ ಮಾಡುತ್ತಾರೆ. ವರ್ಲ್ಡ್ ಬ್ಯಾಂಕ್‌ನವರು ಸ್ಪಾನ್ಸರ್ ಮಾಡುತ್ತಾರೆ. ಆದ್ದರಿಂದ ಈ ಉದ್ದೇಶ ಏನೆಂದರೆ, ಇದಕ್ಕೆ ಜನರಲ್ ಮಾರ್ಗದರ್ಶಿ ಬೇರೆ ಇದೆ. ಕೇಂದ್ರ ಸರ್ಕಾರದವರು ಮಾರ್ಗದರ್ಶಿಯನ್ನು ಎಲ್ಲಾ ರಾಜ್ಯಗಳಿಗೂ ಕಳುಹಿಸಿಕೊಟ್ಟಿದ್ದಾರೆ. ಆ ರಾಜ್ಯ ಸರ್ಕಾರಗಳು ಆ ಒಂದು ಮಾರ್ಗದರ್ಶಿ ಚೌಕಟ್ಟಿನಲ್ಲಿ ಈ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಕೆಲವು ಜಪಾನ್ ಗವರ್ನಮೆಂಟ್ ಫಂಡ್‌ನಿಂದ, ಇನ್ನು ಕೆಲವು ಐಬಿಐಸಿ, ಜಪಾನ್ ಗವರ್ನಮೆಂಟ್ part of japan Government ಅವರ ಆಹ್ವಾನದ ಮೇಲೆ ಹೋದಾಗ ಅವರ ಖರ್ಚುವೆಚ್ಚ ಎಲ್ಲವನ್ನು ಅವರೇ ಭರಿಸುತ್ತಾರೆ. ಆದ್ದರಿಂದ ಇವು ಸರ್ವೇ ಸಾಮಾನ್ಯವಾಗಿ ಆಗಬೇಕಾಗಿರತಕ್ಕಂಥ ಖರ್ಚುವೆಚ್ಚಗಳು. ರಾಜ್ಯ ಸರ್ಕಾರ ಎಷ್ಟು ಭರಿಸಬೇಕಾಗುತ್ತದೆ ಆ ಟ್ರಸ್ಟಿನ ಆ ಉದ್ದೇಶ ಏನು ಎನ್ನುವ ಆಧಾರದ ಮೇಲೆ ನಾವು ತೀರ್ಮಾನ ಮಾಡಬೇಕಾಗುತ್ತದೆ.

ಶ್ರೀ ಎಂ. ಚಂದ್ರಪ್ಪ :- ಮಾನ್ಯ ಅಧ್ಯಕ್ಷರೆ, ಇವತ್ತು ಕೇಂದ್ರ ಸರ್ಕಾರ ಇರಬಹುದು, ಸರ್ಕಾರಕ್ಕೆ ಸಂಬಂಧಪಟ್ಟ ಸಂಸ್ಥೆ ಇರಬಹುದು, ಇವೆಲ್ಲಾ ಸರ್ಕಾರದ ಆಡಳಿತಕ್ಕೆ ಒಳಪಟ್ಟ ಸಂಸ್ಥೆಗಳು 1957ನೇ ಇಸವಿಯಿಂದ 40-45 ವರ್ಷಗಳ ಕಾಲ ಎಲ್ಲಾ ಪಬ್ಲಿಕ್ ಅಂಡರ್ ಟೇಕಿಂಗ್ ಒಳಗಡೆ ಬರುವ ಸಂಘಸಂಸ್ಥೆಗಳು 85 ಇವೆ. ಅವೆಲ್ಲವೂ ಕೂಡ ಕರ್ನಾಟಕ ರಾಜ್ಯದಲ್ಲಿ ಮುಚ್ಚಿ ಹೋಗುವ ಪರಿಸ್ಥಿತಿಯಲ್ಲಿ ಇವೆ, ಎಲ್ಲಾ ಕಂಪನಿ ಆಕ್ಟ್‌ಗಳ ಕೆಳಗಡೆ ವಿದೇಶ ಪ್ರವಾಸ ಮಾಡತಕ್ಕಂಥದ್ದು, ಅಂತಹ ವಿಚಾರದಲ್ಲಿ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿರತಕ್ಕಂತಹ ಅಧಿಕಾರಿಗಳ ಬಗ್ಗೆ ಯಾವುದೇ ರೀತಿಯ ಕಡಿವಾಣ ಇಲ್ಲ. ಇವರಿಗೆ ಬರ ಬಂದಿಲ್ಲವಾ? ಶಾಸಕರು ಯಾರೂ ಯಾವ ವಿದೇಶ ಪ್ರವಾಸವನ್ನೂ ಕೂಡ ಮಾಡಿಲ್ಲ. ದೊಡ್ಡದಾಗಿ ಹೈಕೋರ್ಟ್‌ನಲ್ಲಿ ಸ್ಟೇ ಮಾಡಿಸತಕ್ಕಂಥದ್ದು, ಮತ್ತು ಹೈಕೋರ್ಟಿಗೆ ಸಂಬಂಧಪಟ್ಟ ಹಾಗೆ ನಮ್ಮ ಅಧಿಕಾರಿಗಳು ಮಾಹಿತಿ ಕೊಡುವುದು ನಾನು ಕೇಳಿದ್ದೇನೆ ಅದನ್ನು ನಾನು ಪ್ರಸ್ತಾಪ ಮಾಡುವುದಿಲ್ಲ. ಆದರೆ ನಾನು ಕೇಳುವುದು ಒಟ್ಟು ಕರ್ನಾಟಕ ರಾಜ್ಯದಲ್ಲಿ ಇವರು ಹೋಗಿರತಕ್ಕಂತಹ ಪ್ರವಾಸದ ಬಗ್ಗೆ ಎಷ್ಟು ವೆಚ್ಚವಾಗಿದೆ ಎಂದು ಕೇಳಿದರೆ ಕೊಡಲಿಕ್ಕೆ ಸಾಧ್ಯವಾಗಿಲ್ಲ. ಅದರ ಜೊತೆಗೆ ಸರ್ಕಾರದ ಕಂಪನಿಗಳು ಎಲ್ಲವೂ ಲಾಸ್‌ನಲ್ಲಿರುವುದರಿಂದ ಇವರು ಏತಕ್ಕಾಗಿ ವಿದೇಶ ಪ್ರವಾಸ ಹೋಗಬೇಕು? ಹೋಗುವ ಅವಶ್ಯಕತೆ ಇಲ್ಲ. ದಯಮಾಡಿ ಇವರಿಗೆ ಕಡಿವಾಣ ಹಾಕುತ್ತೀರಾ? ಅವರು ಹೋಗದ ಹಾಗೆ ಮಾಡುವುದಕ್ಕೆ ಏನಾದರೂ ಕ್ರಮ ಕೈಗೊಳ್ಳುತ್ತೀರಾ ಎಂಬುದನ್ನು ತಿಳಿಸಬೇಕು. ನನ್ನ ಇನ್ನೊಂದು ಪ್ರಶ್ನೆ ಏನೆಂದರೆ ಸತ್ಯಕ್ಕೆ ದೂರವಾದ ಮಾಹಿತಿಯನ್ನು ಕೊಟ್ಟಿರತಕ್ಕಂಥ ಡಿ.ಪಿ.ಎ.ಆರ್. ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುತ್ತಾರೆಯೋ ಇಲ್ಲವೋ ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕೆಂದು ವಿನಂತಿಸುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ :- ಮಾನ್ಯ ಅಧ್ಯಕ್ಷರೇ, ಈ ವರ್ಷಾನೇ ವಿದೇಶ ಪ್ರವಾಸಕ್ಕೆ ಸಂಬಂಧಪಟ್ಟಂತೆ 22 ಜನ ಅಧಿಕಾರಿಗಳು ಏನು ಪ್ರಪೋಸಲ್‌ನ್ನು ನನಗೆ ಕಳುಹಿಸಿದ್ದರೋ

ಅದನ್ನು ನಾನು ರಿಜೆಕ್ಟ್ ಮಾಡಿದ್ದೇನೆ. ಆದ್ದರಿಂದ ಮಾನ್ಯ ಸದಸ್ಯರು ಏನು ಉದ್ದೇಶ ಪಟ್ಟಿದ್ದಾರೋ ಅದು ಕ್ರಮ ಕ್ರಮವಾಗಿ ಆಗುತ್ತದೆ. ಆದರೆ ರಾಜ್ಯ ಸರ್ಕಾರ ವಿಶೇಷವಾಗಿ ಖರ್ಚನ್ನು ಭರಿಸಲೇ ಬೇಕಾದ ಸಂದರ್ಭ ಬಂದರೆ ಮತ್ತು ಅದರಿಂದ ರಾಜ್ಯದ ಒಟ್ಟಾರೆ ಒಳಿತು ಸಾಧನೆಯಾಗಲಿಕ್ಕೆ ಅದು ಪೂರಕವಾಗಿದ್ದರೆ ಅಂಥವರನ್ನು ನಾವು ಕಳುಹಿಸಿಕೊಡಬೇಕಾಗುತ್ತದೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಈ ವರ್ಷ ರಿಜಕ್ಟ್ ಮಾಡಿದ್ದೇನೆ ಯಾರನ್ನು ಕಳುಹಿಸಿಲ್ಲ ಎಂದು ಹೇಳಿದ್ದಾರೆ. ಬಹಳ ಸಂತೋಷ. ಈಗಾಗಲೇ ಇದರಲ್ಲಿರುವ ಎಕ್ಸಪೆಂಡಿಚರ್ ವಿವರಗಳನ್ನು ನೋಡಿದರೆ ಹೆಚ್ಚು ಕಡಿಮೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ವಿದೇಶಕ್ಕೆ ಕಳುಹಿಸುವುದು ಬೇಡ ಎಂದು ನಾನು ಹೇಳುವುದಿಲ್ಲ. ಆದರೆ ಅಧಿಕಾರಿಗಳು ವಿದೇಶಕ್ಕೆ ಹೋಗಿ ಬಂದ ಮೇಲೆ ಏನಾದರೂ ಒಂದು ಒಳ್ಳೆಯ ಯೋಜನೆಗಳನ್ನು ರೂಪಿಸಿ ರಾಜ್ಯಕ್ಕೆ ಅನುಕೂಲವಾಗುವಂಥ ಕೆಲಸಗಳನ್ನು ಅಧಿಕಾರಿಗಳು ಮಾಡಿದ್ದಾರೆಯೇ? ಇವರು ಕೊಟ್ಟಿರುವ ವಿವರಗಳನ್ನು ನೋಡಿದರೆ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಮೂಲಕವೇ ಹೆಚ್ಚು ಅಧಿಕಾರಿಗಳು ವಿದೇಶಕ್ಕೆ ಹೋಗಿರುವುದು. ಆ ಅಧಿಕಾರಿಗಳು ಆ ಸಂಸ್ಥೆ ಮೂಲಕ ವಿದೇಶ ಪ್ರವಾಸಕ್ಕೆ ಹೋಗಿ ಬಂದಮೇಲೆಯೇ ನಷ್ಟವಾಗಿವೆ. ಆದ್ದರಿಂದ ಇವರನ್ನು ಏತಕ್ಕಾಗಿ ವಿದೇಶಕ್ಕೆ ಕಳುಹಿಸಬೇಕು? ವಿದೇಶಕ್ಕೆ ಕಳುಹಿಸುವ ಉದ್ದೇಶ ಏನೆಂದರೆ, ವಿದೇಶಗಳಲ್ಲಿ ಆಡಳಿತ ವ್ಯವಸ್ಥೆ, ಹಣಕಾಸಿನ ವ್ಯವಸ್ಥೆ ಹಾಗೂ ಮಾರ್ಕೆಟಿಂಗ್ ವ್ಯವಸ್ಥೆ ಹೇಗಿವೆ ಎಂಬುದನ್ನು ನೋಡಿಕೊಂಡು ಬಂದು ಆ ನಿಟ್ಟಿನಲ್ಲಿ ಇಲ್ಲಿ ಕೆಲಸ ಮಾಡಲಿ ಎನ್ನುವ ಉದ್ದೇಶ ಇರುತ್ತದೆ. ಆದರೆ ಶಾಸಕರು ವಿದೇಶಕ್ಕೆ ಹೋಗಬೇಕು ಎನ್ನುವ ಸಂದರ್ಭದಲ್ಲಿ ಯಾರೋ ಒಬ್ಬ ಪುಣ್ಯಾತ್ಮ ಹೈಕೋರ್ಟ್‌ನಲ್ಲಿ ಅದಕ್ಕೆ ತಡೆಯಾಜ್ಞೆ ತಂದರು. ವಿದೇಶಕ್ಕೆ ನಾವು ಹೋಗಲಿಲ್ಲ. ಒಂದು ರೀತಿ ಅಪಹಾಸ್ಯಕ್ಕೆ ಗುರಿಯಾದೆವು.

ಅಧ್ಯಕ್ಷರು :- ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ಇದು ಐ.ಎ.ಎಸ್. ಆಫೀಸರ್‌ಗಳಿಗೆ ಸಂಬಂಧಪಟ್ಟಂತಿರುವುದು. ಶಾಸಕರ ವಿದೇಶ ಪ್ರವಾಸದ ಬಗ್ಗೆ ಈಗ ಚರ್ಚೆ ಬೇಡ.

ಶ್ರೀ ಕೆ.ಎಂ. ಕೃಷ್ಣ ಮೂರ್ತಿ:- ಮಾನ್ಯ ಅಧ್ಯಕ್ಷರೆ, ತಾವು ಶಾಸಕರ ಪರ ಇರಬೇಕು ಸ್ವಾಮಿ. ತಾವು ಶಾಸಕರನ್ನು ವಿದೇಶಕ್ಕೆ ಕಳುಹಿಸುವುದಕ್ಕೆ ಪ್ರಯತ್ನ ಮಾಡಬೇಕು. ಮುಖ್ಯಮಂತ್ರಿಗಳು ಇದಕ್ಕೇನಾದರೂ ಉತ್ತರ ಕೊಡುತ್ತಾರೆಯೇ?

ಅಧ್ಯಕ್ಷರು :- ಅದಕ್ಕೇ ಬೇರೆ ಪ್ರಶ್ನೆಯನ್ನು ಕೇಳಿ Dont mix up the issues

ಶ್ರೀ ಕೆ.ಎಂ. ಕೃಷ್ಣಮೂರ್ತಿ:- ಶಾಸಕರಾದರೂ ವಿದೇಶಕ್ಕೆ ಹೋಗಿ ನೋಡಿಕೊಂಡು ಬಂದರೆ ಯೋಜನೆಗಳನ್ನು ಮಾಡುವುದರ ಬಗ್ಗೆ, ಆಡಳಿತ ನಡೆಸುವುದರ ಬಗ್ಗೆ ತಿಳಿದುಕೊಳ್ಳಬಹುದು. ಮಂತ್ರಿಗಳು ವಿದೇಶಕ್ಕೆ ಹೋಗಿ ಬಂದಿದ್ದರೆ ತದನಂತರ ಏನು ಕೆಲಸ ಮಾಡಿದ್ದಾರೆ ಎಂಬುದು ಬೇಕು. ಮಾನ್ಯ ಮುಖ್ಯಮಂತ್ರಿಗಳು ಮುಂದಿನ ದಿನಗಳಲ್ಲಿ ಅಧಿಕಾರಿಗಳನ್ನು ವಿದೇಶಕ್ಕೆ ಕಳುಹಿಸಬೇಕಾದರೆ ಆದಷ್ಟು ಕಡಿವಾಣ ಹಾಕುತ್ತೇನೆ ಎನ್ನುವ ಮಾತನ್ನು ಹೇಳಿದರು. ಅದನ್ನು ನಾನು ಸ್ವಾಗತಿಸುತ್ತೇನೆ, ಮುಂದೆಯೂ ಕೂಡ ಇದೇ ರೀತಿ ಕಡಿವಾಣ ಹಾಕಿ, ಕಾರ್ಯನಿಮಿತ್ತ ಹೋಗೋದು ಬೇಕಾಗಿಲ್ಲ. ಅದರಿಂದ ಪ್ರಯೋಜನ ಆಗುವ ರೀತಿ ಹಣ ಖರ್ಚು ಆಗಬೇಕಷ್ಟೆ. ಆ ಬಗ್ಗೆ ತಮ್ಮ ಮುಖಾಂತರ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು) :- ಮಾನ್ಯ ಅಧ್ಯಕ್ಷರೇ, ತಾವೇನು ಅವರಿಗೆ ಇಂಗ್ಲೀಷ್‌ನಲ್ಲಿ ಹೇಳಿದಿರಿ ಅದು ಅವರಿಗೆ ಅರ್ಥವಾಗದೇ ಮತ್ತೆ ಮುಂದೆ ಮಾತನಾಡುತ್ತಲೇ ಇದ್ದಾರೆ.

ಅಧ್ಯಕ್ಷರು:- ಇರಲಿ ಬಿಡಿ.

ಶ್ರೀ ಎಂ.ಓ. ಅಪ್ಪಚ್ಚುರಂಜನ್:- ಮಾನ್ಯ ಅಧ್ಯಕ್ಷರೆ, ಇನ್ನೊಂದು ವಿಷಯ. ಸರ್ಕಾರ ಕೊಟ್ಟಂಥ ಮಿತಿಗಿಂತ ಹೆಚ್ಚು ಖರ್ಚು ಮಾಡಿದಂಥ ಹಣವನ್ನು ಅಧಿಕಾರಿಗಳಿಂದ ರೆಕವರಿ ಮಾಡುತ್ತೀರಾ? ಆ ರೀತಿ ರೆಕವರಿ ಮಾಡಬೇಕಾದ ಮೊತ್ತ ಎಷ್ಟು ಕೋಟಿ ರೂ. ಇದೆ? ದಯವಿಟ್ಟು ಈ ಬಗ್ಗೆ ಹೇಳಿದರೆ ಒಳ್ಳೆಯದು. ಏಕೆಂದರೆ ಆಡಿಟ್ ವರದಿಯಲ್ಲಿ ನಾನು ನೋಡಿದ್ದೇನೆ. ಸುಮಾರು 5 ಕೋಟಿ ರೂಪಾಯಿ ಮಿತಿಗಿಂತ ಹೆಚ್ಚು ಖರ್ಚು ಮಾಡಿದ್ದಾರೆ. ಅದನ್ನು ರೆಕವರಿ ಮಾಡುತ್ತೀರಾ?

ಶ್ರೀ ಎಸ್.ಎಸ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, ನನಗೆ ಇದನ್ನು ಹೇಳುವುದಕ್ಕೆ ಬೇಜಾರು ಆಗುತ್ತದೆ. ಏಕೆಂದರೆ ಇಷ್ಟು ದಿವಸ ಮಂತ್ರಿಗಳು ಇಂಗ್ಲೀಷ್‌ನಲ್ಲಿ ಉತ್ತರ ಕಳುಹಿಸುತ್ತಿದ್ದರು. ಈಗ ಮಾನ್ಯ ಮುಖ್ಯಮಂತ್ರಿಗಳೂ ಇಂಗ್ಲೀಷ್‌ನಲ್ಲಿ ಉತ್ತರ ಕಳುಹಿಸಿದರೆ ಈ ರಾಜ್ಯದಲ್ಲಿ ಕನ್ನಡ ಭಾಷೆ ಆಡಳಿತದಲ್ಲಿ ಅನುಷ್ಠಾನದಲ್ಲಿ ಬರುವುದಾದರೂ ಹೇಗೆ? ಬೇಕಾದರೆ ನೀವು ಕನ್ನಡ ಬೇಡವೇ ಬೇಡ, ಎಲ್ಲಾ ಇಂಗ್ಲೀಷ್‌ನಲ್ಲಿಯೇ ನಡೆಯಬೇಕು ಎಂದು ಸರ್ಕಾರಿ ಆದೇಶ ಹೊರಡಿಸಿಬಿಡಿ, ಸಂತೋಷ ಪಡುತ್ತೇನೆ. ಈ ರೀತಿ ಪ್ರತಿ ದಿವಸ ನಡೆಯುತ್ತಿದೆ, ಅಧ್ಯಕ್ಷರೆ, ತಮ್ಮ ಆದೇಶವೂ ಕೂಡ ಜಾರಿಯಲ್ಲಿ ಬರುವುದಿಲ್ಲ. ಇನ್ನು ಮುಖ್ಯಮಂತ್ರಿಗಳಿಂದಲೂ ಉತ್ತರ ಇಂಗ್ಲೀಷ್‌ನಲ್ಲಿ ಬರುವುದಕ್ಕೆ ಶುರುವಾದರೆ ಇನ್ನು ಯಾವಾಗ ಬರುವುದು ಕನ್ನಡ? ಇದು ಒಂದು ಪ್ರಶ್ನೆ ಅಧ್ಯಕ್ಷರೆ. ಇದಕ್ಕೇ ತಾವೇ ಅದನ್ನು ಹೇಗೆ ಸರಿಪಡಿಸುತ್ತೀರೋ, ಮುಖ್ಯಮಂತ್ರಿಗಳು ಇದರ ಬಗ್ಗೆ ಏನು ನಿರ್ಣಯ ತೆಗೆದುಕೊಳ್ಳುತ್ತಾರೋ, ತೆಗೆದುಕೊಳ್ಳಲಿ. ಅಧಿಕಾರಿಗಳ ಮೇಲೆ ಹೇಗೆ ಕ್ರಮ ತೆಗೆದುಕೊಳ್ಳುತ್ತಾರೋ ಅದನ್ನು ತೆಗೆದುಕೊಳ್ಳಲಿ. ಇನ್ನು ಮಾನ್ಯ ಸದಸ್ಯರ ಪ್ರಶ್ನೆ "ಈ ರೀತಿ ವಿದೇಶ ಪ್ರವಾಸದಿಂದ ರಾಜ್ಯಕ್ಕೆ ಆದ ಅನುಕೂಲತೆಗಳೇನು"? ಅದಕ್ಕೆ ಉತ್ತರವಾಗಿ ರಾಜ್ಯದ ವಿಜ್ಞಾನ ಮತ್ತು ತಂತ್ರಜ್ಞಾನ, ಕೈಗಾರಿಕೆ, ಕೃಷಿ ಹಾಗೂ ಇತರೇ ಕ್ಷೇತ್ರಗಳಲ್ಲಿ ಅಭಿವೃದ್ಧಿ ಹೊಂದಲು ಸಾಧ್ಯವಾಗಿದೆ. ಅಲ್ಲದೇ ವಿದೇಶಿಯರು ಹೆಚ್ಚಿನ ಪ್ರಮಾಣದಲ್ಲಿ ಬಂಡವಾಳ ತೊಡಗಿಸಲು ಮುಂದೆ ಬರುತ್ತಿದ್ದು ರಾಜ್ಯದ ಸರ್ವೋತೋಮುಖ ಅಭಿವೃದ್ಧಿಯಾಗಲು ದಾರಿಯಾಗಿದೆ ಎಂದಿದ್ದಾರೆ. ಇದು ಮೈಲಾರ ನಿಂಗಪ್ಪನ ಕಾಣಿಕೆ ಎಂದು ಹೇಳುತ್ತಾರಲ್ಲಾ ಆಕಾಶ ಸಿಡಿಲು ಹೊಡೆದು ಬರ ಆಯಿತು ಮಳೆ ಹೋದರೆ ಹೆಚ್ಚಿಗೆ ಮಳೆ ಬಂದರೂ ಹಚ್ಚಿತೋ ಇದು ಆ ರೀತಿಯ ಉತ್ತರವಾಗಿದೆ. ಯಾವ ಯಾವ ಅಧಿಕಾರಿಗಳು ವಿದೇಶಕ್ಕೆ ಏನೇನು ವಿದೇಶ ಬಂಡವಾಳ ಬಂದಿದೆ ಮತ್ತು ಅದರಿಂದ ಈ ರಾಜ್ಯಕ್ಕೆ ಏನೇನು ಲಾಭವಾಗಿದೆ ಎನ್ನುವ ಬಗ್ಗೆ ಹೇಳಬೇಕು. ವಿದೇಶಕ್ಕೆ ಹೋಗಬೇಕಾಗುತ್ತದೆ, ವಿದೇಶಕ್ಕೆ ಹೋದಾಗ ಹೋಗಬೇಡ ಅನ್ನುವವರ ಪೈಕಿ ನಾನೇನೂ ಇಲ್ಲ. ಏನು ಅನುಕೂಲತೆಗಳಾಗಿವೆ ಎನ್ನುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಎಸ್. ಸುರೇಶ್‌ಕುಮಾರ್ :- ಮಾನ್ಯ ಅಧ್ಯಕ್ಷರೆ, ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಲ್ಲಿ, ಸರ್ಕಾರದಲ್ಲಿ ನನ್ನ ಒಂದು ಮನವಿ. ಅಧಿಕಾರಿಗಳು ವಿದೇಶಕ್ಕೆ ಹೋಗಬೇಕಾದರೆ ನಿರ್ದಿಷ್ಟ ಉದ್ದೇಶ ಇಟ್ಟುಕೊಂಡು ಹೋಗುತ್ತಾರೆ ಎಂದು ತಾವು ಹೇಳಿದಿರಿ

Least the government can do is ಅವರು ವಿದೇಶಕ್ಕೆ ಹೋಗಿ ಟ್ರೈನಿಂಗೋ, ತರಬೇತಿನೋ, ಜ್ಞಾನವನ್ನೋ ಪಡೆದುಕೊಂಡು ಬಂದಮೇಲೆ ಒಂದು ವರ್ಷವಾದರೂ ಅವರು ಅದೇ ಜಾಗದಲ್ಲಿ ಮುಂದುವರಿಯುವ ಹಾಗೆ ಮಾಡಬೇಕು. ಅನೇಕ ಸಂದರ್ಭಗಳಲ್ಲಿ ನಾನು ನೋಡುತ್ತಾ ಬಂದಿದ್ದೇನೆ, ಅವರು ವಿದೇಶದಿಂದ ಬಂದ ಮೂರು ತಿಂಗಳಲ್ಲಿಯೇ ಆ ಜಾಗದಿಂದ ಬೇರೆ ಕಡೆಗೆ ಟ್ರಾನ್ಸ್‌ಫರ್ ಮಾಡುತ್ತಾರೆ. ವಿದೇಶದಿಂದ ಏನು ಜ್ಞಾನವನ್ನು ಪಡೆದುಕೊಂಡು ಬರುತ್ತಾರೋ ಅದನ್ನು ಆ ಇಲಾಖೆಗೆ ಅಥವಾ ಆ ಸಂಸ್ಥೆಗೆ ಉಪಯೋಗಿಸುವುದಕ್ಕೆ ಅಥವಾ ಅಳವಡಿಸುವುದಕ್ಕೆ, ಅನುಷ್ಠಾನಕ್ಕೆ ತರುವುದಕ್ಕೆ ಆಗುವುದಿಲ್ಲ. ಆದ್ದರಿಂದ ಸರ್ಕಾರ ಈ ನಿರ್ಧಾರ ತೆಗೆದುಕೊಳ್ಳಬಹುದೇ? ಯಾರು ಸ್ಪೆಸಿಫಿಕ್ ಪರ್ಪಸ್‌ಗೆ ವಿದೇಶ ಪ್ರವಾಸಕ್ಕೆ ಹೋಗುತ್ತಾರೋ ಅವರು ತರಭೇತಿ ಪಡೆದುಕೊಂಡು ಬಂದಮೇಲೆ ಅವರನ್ನೇ ಆಯಾ ಇಲಾಖೆಯಲ್ಲಿ ಕನಿಷ್ಠ ಪಕ್ಷ ಒಂದು ವರ್ಷವಾದರೂ ಮುಂದುವರಿಸುವುದಕ್ಕೆ ಸರ್ಕಾರ ತೀರ್ಮಾನ ತೆಗೆದುಕೊಳ್ಳಬಹುದು.

ಅಧ್ಯಕ್ಷರು:– ಆಯಿತು. ಮುಖ್ಯಮಂತ್ರಿಗಳು ಉತ್ತರ ಹೇಳುತ್ತಾರೆ.

ಶ್ರೀ ಎಸ್.ಎಂ. ಕೃಷ್ಣ– ಮಾನ್ಯ ಅಧ್ಯಕ್ಷರೆ, ಕೊನೆ ಪ್ರಶ್ನೆಗೆ ಉತ್ತರ ಸರ್ವೇಸಾಮಾನ್ಯವಾಗಿ ಯಾವುದಾದರೂ ಒಂದು ಸೀಮಿತವಾದಂಥ ಉದ್ದೇಶದಿಂದ ಒಬ್ಬ ಅಧಿಕಾರಿಯನ್ನು ನಾವು ಹೊರದೇಶಗಳಿಗೆ ಕಳುಹಿಸಿದಾಗ Commonsense dictate ಏನು ಮಾಡುತ್ತದೆ ಎಂದು ಹೇಳಿದರೆ ಅವರನ್ನು ಅಲ್ಲಿಯೇ ಮುಂದುವರಿಸಿ ಅವರ ಲಾಭ ಆ ಸಂಸ್ಥೆಗೆ ಮತ್ತು ಆ ಮೂಲಕ ರಾಜ್ಯಕ್ಕೆ ಸಿಗತಕ್ಕಂಥ ವಾತಾವರಣ ಸೃಷ್ಟಿ ಮಾಡಬೇಕು ಎಂದು ತಾವೇನು ಉದ್ದೇಶ ಪಟ್ಟಿದ್ದೀರಿ ಅದಕ್ಕೆ ನಾನು ಪೂರಕವಾಗಿದ್ದೇನೆ. ಅದರಲ್ಲಿ ನಾನು ಸಮಭಾಗಿಯಾಗಿದ್ದೇನೆ. ಮಾನ್ಯ ಸದಸ್ಯರು ಕೇಳಿದರು, ಹೆಚ್ಚು ಹಣ ಅಧಿಕಾರಿ ಡ್ರಾ ಮಾಡಿದ್ದರೆ ಅದನ್ನು ವಾಪಸ್ಸು ಪಡೆದಿದ್ದೀರಾ ಆ ರೀತಿ ಎಷ್ಟು ಇದೆ ಎಂದು ಕೇಳಿದರು. ಸರ್ವೇ ಸಾಧಾರಣವಾಗಿ ಒಂದು ಬಜೆಟ್ ಫಿಕ್ಸ್ ಮಾಡಿರುತ್ತಾರೆ. ಆ ಬಜೆಟ್‌ನ್ನು ಮೀರಿದರೆ ಹಾಗೂ ಅದಕ್ಕೆ ಸಕಾರಣಗಳು ಇಲ್ಲದೇ ಹೋದರೆ ನಾವು ಕೆಲವು ಕ್ರಮವನ್ನು ಕೈ ಗೊಳ್ಳುತ್ತೇವೆ. ಉದಾಹರಣೆಗೆ ಅವರು ವಾಪಸ್ಸು ಬರಬೇಕಾದರೆ ಯಾವುದೋ ಒಂದು ವಿಶ್ವದ ಬೆಳವಣಿಗೆಗಳ ಕಾರಣ ಆ ವಿಮಾನ ಬರಲಿಲ್ಲ, ಅಂಥ ಅಚಾತುರ್ಯಗಳು ನಡೆದಾಗ ಸ್ವಲ್ಪ ಜಾಸ್ತಿ ಎಕ್ಸ್‌ಪೆಂಡಿಚರ್ ಆದರೆ ಅದಕ್ಕೆ ಸಮಜಾಯಿಷಿ ಅವರು ಕೊಟ್ಟಿದ್ದರೆ ಅದನ್ನು ಅಬ್ಸಾರ್ಬ್ ಮಾಡುತ್ತೇವೆ, ಇಲ್ಲದೇ ಇದ್ದರೆ ಆ ಅಧಿಕಾರಿಯಿಂದ ವಸೂಲು ಮಾಡತಕ್ಕಂಥದ್ದು ಸರ್ಕಾರದ ಸಾಧಾರಣವಾದಂಥ ಒಂದು ನಿಯಮ. ವಿದೇಶ ಪ್ರವಾಸ ಏತಕ್ಕಾಗಿ ಹೋಗುತ್ತಾರೆ ಎನ್ನತಕ್ಕಂಥದ್ದರ ಬಗ್ಗೆ ನಾನು ಮೊದಲನೆಯ ಪ್ರಶ್ನೆಯಲ್ಲಿಯೇ ಅದಕ್ಕೆ ಉತ್ತರವನ್ನು ಹೇಳಿದ್ದೇನೆ. ಎಷ್ಟು ಸಫಲವಾಗಿದೆ ಎಂಬುದರ ಬಗ್ಗೆ ಕಾಲವೇ ಅದಕ್ಕೆ ಒಂದು ನಿರ್ಣಯವನ್ನು ಬೇಕಾದಷ್ಟು ಆದರೂ ಇತರ ಪ್ರಶ್ನೆಗಳಿಗೆ ಹೇಗೆ ಕಾಲ ನಿರ್ಣಾಯಕವಾಗುತ್ತದೆಯೋ ಹಾಗೆಯೇ ಒಬ್ಬ ಅಧಿಕಾರಿಯ contribution to the state ಬಗ್ಗೆಯೂ ಕೂಡ ಕಾಲ ನಿರ್ಣಯಿಸಬೇಕಾಗುತ್ತದೆಯೇ ಹೊರತು ಅದನ್ನು ನಾವು ಸ್ಪೆಸಿಫಿಕ್ ಆಗಿ ಅವರು ಬಂದ ತಕ್ಷಣ ಇಷ್ಟೇ ಆಯಿತು ಎಂದು ಹೇಳುವುದಕ್ಕೆ ಬರುವುದಿಲ್ಲ.

## ಹುಣಸೂರು ತಾಲ್ಲೂಕಿನ ಸಣ್ಣ ನೀರಾವರಿ ಅನುದಾನ ನಿಗದಿಯಲ್ಲಿ ಬದಲಾವಣೆ

176 (1972) ಶ್ರೀ ವಿ. ಪಾಪಣ್ಣ (ಹುಣಸೂರು) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?